**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ. ದಂ. ನ್ಯಾಯಾಲಯ, ಬಳ್ಳಾರಿ.**

| | |
|---|---|
| ***ಹೆಸರು*** | ಶ್ರೀ. ಆರ್. ಶಿವರಾಜ್ |
| ***ತಂದೆಯ ಹೆಸರು*** | ಶ್ರೀ.ಕಾಶಿ ವಿಶ್ವನಾಥ |
| ***ವಯಸ್ಸು*** | 40 ವರ್ಷ |
| ***ವೃತ್ತಿ*** | ಇಂಜಿನೀಯರ್ |
| ***ವಿಳಾಸ*** | ಬೆಂಗಳೂರು |

**ದಿನಾಂಕಃ 20-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ**

1. ಚಾಸಾ 1 ನನ್ನ ಸಹೋದರಿ. ಚಾಸಾ 2 ನನ್ನ ತಂದೆ. ಚಾಸಾ 3 ನನ್ನ ತಾಯಿ. 1 ನೇ ಆರೋಪಿ ಚಾಸಾ 1 ರವರ ಗಂಡ. ಉಳಿದ ಆರೋಪಿತರು 1 ನೇ ಆರೋಪಿಯ ತಂದೆ ತಾಯಿ ಮತ್ತು ಸಂಬಂಧಿಕರು.

2. ಚಾಸಾ 1 ರವರ ಮದುವೆಯು 1 ನೇ ಆರೋಪಿಯೊಂದಿಗೆ ದಿಃ 29-04-2007 ರಂದು ಮುಂಡ್ರಿಗಿ ಅನ್ನದಾನೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದಿರುತ್ತದೆ. ಚಾಸಾ 1 ಮತ್ತು 1 ನೇ ಆರೋಪಿತರ ಮದುವೆಯು ಹಿರಿಯರ ಸಮ್ಮುಕದಲ್ಲಿ ನಡೆದಿರುತ್ತದೆ. 1 ನೇ ಆರೋಪಿಗೆ 1 ಲಕ್ಷ ರೂಪಾಯಿ ವರದಕ್ಷಣೆ ಮತ್ತು ಒಂದು ವಾಚ್ ಹಾಗೂ ಬಂಗಾರದ ಉಂಗುರಗಳನ್ನು ಕೊಟ್ಟಿರುತ್ತೇವೆ. ಮದುವೆಯ ನಂತರ ಚಾಸಾ 1 ರವರು ಕಪ್ಪಗಲ್ಲು ರಸ್ತೆಯ ಆರೋಪಿತರ ಮನೆಗೆ ಬಂದಿರುತ್ತಾರೆ. ಮದುಯಾದ ಒಂದು ವರ್ಷಕ್ಕೆ ಗರ್ಭವತಿಯಾಗಿದ್ದು ನಮ್ಮ ಮನೆಯಾದ ಬೆಂಗಳೂರಿಗೆ ಬಂದಿರುತ್ತಾರೆ. ತದನಂತರ 2-3 ತಿಂಗಳಿಗೆ ನಮಗೆ ಆರೋಪಿತರ ಮನೆಗೆ ಯಾರೋ ಒಬ್ಬ ಮಹಿಳೆ ಬಂದು ಹೋಗುವುದು ಮಾಡುತಿದ್ದಾರೆ ಎಂದು ತಿಳಿದು ಬಂದಿರುತ್ತದೆ. ಚಾಸಾ 1 ರವರ ಹೆರಿಗೆ ಯಾದ ನಂತರ ಚಾಸಾ 1 ಮತ್ತು ಅವರ ಮಗುವನ್ನು ನಾವು ಆರೋಪಿತರ

ಮನೆಗೆ ಕಳುಹಿಸಿಕೊಟ್ಟಿರುತ್ತೇವೆ. ತದನಂತರ 1 ನೇ ಆರೋಪಿಗೂ ಮತ್ತು ಚಾಸಾ 1 ರವರಿಗೆ ಮಾತಿಗೆ ಮಾತಾಗಿದ್ದು, ತದನಂತರ ಚಾಸಾ 1 ಮತ್ತು 1 ನೇ ಆರೋಪಿಗೆ ವೈಮನಸ್ಸಾಗಿರುತ್ತದೆ

3. ಚಾಸಾ 1 ಮತ್ತು 1 ನೇ ಆರೋಪಿ ತರ ನಡುವೆ ಹಿರಿಯರ ಸಮ್ಮುಕದಲ್ಲಿ ಮಾತುಕತೆ ಮಾಡಿರುತ್ತೇವೆ. 1 ನೇ ಆರೋಪಿ ಯೊಂದಿಗೆ 6 ನೇ ಆರೋಪಿ ಸಹ ಒಟ್ಟಿಗೆ ಇದ್ದು ಚಾಸಾ 1 ರವರು ಸದರಿ ವಿಚಾರಕ್ಕೆ ತಕರಾರು ಮಾಡದಂತೆ ಜೀವಿಸಬೇಕು ಎಂದು ಆರೋಪಿತರು ಹೇಳಿರುತ್ತಾರೆ. ಅದಕ್ಕೆ ಚಾಸಾ 1 ರವರು ಒಪ್ಪದೇ ಇದ್ದ ಕಾರಣ ಆರೋಪಿತರು ಚಾಸಾ 1 ರವರಿಗೆ ಕಿರುಕುಳ ನೀಡಲು ಪ್ರಾರಂಭಿಸಿರುತ್ತಾರೆ. 1 ನೇ ಆರೋಪಿ ಚಾಸಾ 1 ರವರಿಗೆ ಹೊಡೆಬಡೆ ಮಾಡಿ ಆರೋಪಿಯ ಮನೆಯಿಂದ ಹೊರಗೆ ಹಾಕಲು ಪ್ರಯತ್ನ ಪಟ್ಟಿರುತ್ತಾರೆ. ಆರೋಪಿತರ ಮತ್ತು ಚಾಸಾ 1 ರವರ ಮದ್ಯೆ ಪಂಚಾಯತಿ ಮಾಡಿದರೂ ಆರೋಪಿತರು ಚಾಸಾ 1 ರವರನ್ನು ಸರಿಯಾಗಿ ನೋಡಿಕೊಂಡಿರುವುದಿಲ್ಲ ಹಾಗೂ ಊಟದ ವ್ಯವಸ್ಥೆ ಮಾಡಿರುವುದಿಲ್ಲ. ಆ ಕಾರಣ ನಾವು ಚಾಸಾ 1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತೇವೆ. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

( ಈ ಹಂತದಲ್ಲಿ 2 ಗಂಟೆಯಾಗಿದ್ದು 3 ಗಂಟೆಗೆ ಪಾಟೀಸವಾಲಿಗೆ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಬಳ್ಳಾರಿ.**

**<u>ದಿನಾಂಕಃ 20-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಪಾಟೀಸವಾಲು ಆರೋಪಿ ಪರ ಮಾನ್ಯ ಕೆ ಎಂ ಬಿ ರವರಿಂದ</u>**

**4**. ನನ್ನ ತಂದೆ ಕೊಪ್ರೇಟೀವ್ ಸೊಸೈಟಿಯಲ್ಲಿ ಕೆಲಸ ಮಾಡುತ್ತಾರೆ. ಆರೋಪಿಗಳು ಮೊದಲಿನಿಂದಲೂ ನಮಗೆ ಸಂಬಂಧಿಕರಾಗಬೇಕು ಎಂದರೆ ನಿಜ. ಆರೋಪಿತರು ನಮಗೆ ಮೊದಲಿನಿಂದಲೇ ಸಂಬಂಧಿಕರಾದ ಕಾರಣ ಯಾವುದೇ ವರದಕ್ಷಣೆಯನ್ನು ಪಡೆದುಕೊಂಡಿಲ್ಲ ಎಂದರೆ ಸುಳ್ಳು. ನಾವು ಆರೋಪಿತರಿಗೆ ಬಟ್ಟೆ ಬರೆ, ವಾಚ್ ಗಳನ್ನು ಮದುವೆಕಾಲಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ಚಾಸಾ 1 ರವರನ್ನು 2007 ಫೆಬ್ರವರಿ ಮಾರ್ಚ್ ತಿಂಗಳಲ್ಲಿ

ಹೆರಿಗೆಗಾಗಿ ನಾವು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತೇವೆ. ಹೆರಿಗೆಗೆ ಹೋದ ನಂತರ ಚಾಸಾ 1 ರವರು ಮತ್ತೆ ಬಳ್ಳಾರಿಗೆ ಬಂದಿರುವುದಿಲ್ಲ ಎಂದರೆ ಸುಳ್ಳು.

5. 2008 ನೇ ಇಸವಿಯಲ್ಲಿ ದೇವೆಂದ್ರಪ್ಪ ಚಾಸಾ10 ರವರು ಆರೋಪಿತರ ಮನೆಗೆ ಒಬ್ಬ ಮಹಿಳೆ ಬಂದು ಹೋಗುವುದು ಮಾಡುತಿದ್ದಾರೆ ಎಂದು ನಮಗೆ ಮಾಹಿತಿ ಕೊಟ್ಟಿರುತ್ತಾರೆ. ಚಾಸಾ 10 ರವರು ನಮಗೆ ಫೋನ್ ಮುಖಾಂತರ ಮಾಹಿತಿ ಕೊಟ್ಟಿದ್ದು ಸದರಿ ಫೋನ್ ನಂಬರ್ ನನಗೆ ಹೇಳಲಾಗುವುದಿಲ್ಲ. ನಾವು ಸದರಿ ವಿಚಾರದ ಬಗ್ಗೆ 2008 ರಲ್ಲಿ ಪೊಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ ಕಾರಣ ನಮ್ಮ ಬಳಿ ಯಾವುದೇ ಸಾಕ್ಷಿ ಇರಲಿಲ್ಲ. ಚಾಸಾ 10 ರವರು 1 ನೇ ಆರೋಪಿ ಮನೆಯ ಮಾಲೀಕರು , ಸದರಿಯವರು ನಮಗೆ ಸಂಬಂಧಿಕರಾಗಿರುವುದಿಲ್ಲ. ಆರೋಪಿ 1 ರವರ ಮನೆಗೆ ಯಾವುದೇ ಮಹಿಳೆ ಬಂದು ಹೋಗುವುದು ಮಾಡದೇ ಇರುವ ಕಾರಣ ನಾವು ಆ ಬಗ್ಗೆ ದೂರು ನೀಡಿರುವುದಿಲ್ಲ ಎಂದರೆ ಸುಳ್ಳು. ದಿಃ 24-04-2008 ರಂದು ಆರೋಪಿ 6 ರವರಿಗೆ ತನ್ವೀರ್ ಎಂಬುವವರೊಂದಿಗೆ ಮದುವೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

6. ನಾವು ಪಂಚಾಯತಿಯನ್ನು ಮಾರ್ಚ್ 2010 ರಲ್ಲಿ ಮಾಡಿರುತ್ತೇವೆ. ನಾವು 2010 ಮಾರ್ಚ್ ನಲ್ಲಿ ಚಾಸಾ 1 ಮತ್ತು 1 ನೇ ಆರೋಪಿತರ ಸಂಬಂಧ ಯಾವುದೇ ಪಂಚಾಯತಿ ಮಾಡಿರುವುದಿಲ್ಲ ಎಂದರೆ ಸುಳ್ಳು. ಚಾಸಾ 1 ರವರೆ 1 ನೇ ಆರೋಪಿಯನ್ನು ಬಿಟ್ಟು ಹೋಗಿರುತ್ತಾರೆ ಎಂದರೆ ಸುಳ್ಳು. ಚಾಸಾ 1 ರವರಿಗೆ ಆರೋಪಿತರು ಚೆನ್ನಾಗಿ ನೋಡಿಕೊಳ್ಳುತಿದ್ದು, ಊಟ ಬಟ್ಟೆಗಳನ್ನು ಕೊಡುತಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸುಳ್ಳು. ಚಾಸಾ 1 ಮತ್ತು 1 ನೇ ಆರೋಪಿತರ ನಡುವೆ ವಿಚ್ಛೇದನಾ ಆದೇಶ ವಾಗಿರುತ್ತದೆ ಎಂದರೆ ವಿಚ್ಛೇದನೆ ಆಗಿರುತ್ತದೆ ಎಂದು ನಮಗೆ ಮಾಹಿತಿ ಬಂದಿದ್ದು , ಸದರಿ

ವಿಚ್ಛೇದನಕ್ಕೆ ಚಾಸಾ 1 ಒಪ್ಪಿರುವುದಿಲ್ಲ. ನಾವು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಪೊಲೀಸ್ ಠಾಣೆಗೆ ಮತ್ತು ನ್ಯಾಯಾಲಯಕ್ಕೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿರುತ್ತೇವೆ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಬಳ್ಳಾರಿ.**

**<u>ದಿನಾಂಕಃ 20-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಆದೇಶದ ಮೇರೆಗೆ ಪಾಟೀಸವಾಲು ಆರೋಪಿ ಪರ ಮಾನ್ಯ ಕೆ ಎಂ ಬಿ ರವರಿಂದ</u>**

**<u>4</u>**. ಮೋದಲಿನಿಂದಲೂ ಆರೋಪಿತರು ನಮ್ಮ ಹತ್ತಿರದ ಬಳಗದವರು ಎಂದರೆ ನಿಜ. ಆರೋಪಿತರು ನಮ್ಮ ಹತ್ತಿರದ ಬಳಗದವರಾಗಿರುವುದರಿಂದ ಮದುವೆಯನ್ನು ಆರೋಪಿತರ ಊರಿನಲ್ಲಿ ಮದುವೆಯನ್ನು ಮಾಡಿರುತ್ತಾರೆ ಎಂದರೆ ನಿಜ. ಆರೋಪಿತರು ನಮ್ಮ ಹತ್ತಿರದ ಬಳಗದವರಾಗಿರುವುದಂರಿದ ಮದುವರೆ ಕಾಲಕ್ಕೆ ಯಾವುದೇ ವರದಕ್ಷಣೆಯನ್ನು ಪಡೆದುಕೊಂಡಿಲ್ಲ ಎಂದರೆ ಸುಳ್ಳು. ನಾವು ಆರೋಪಿತರಿಗೆ 20 ಸಾವಿರ ಮೌಲ್ಯದ ಪಾತ್ರೆ ಸಾಮಾನು , 2 ಲಕ್ಷ ವರದಕ್ಷಣೆ ಗಳನ್ನು ಮದುವೆಕಾಲಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸುಳ್ಳು.

5. ಮದುವೆಯಾದ ನಂತರ ಚಾಸಾ 1 ರವರು ಆರೋಪಿಯ ಮನೆಯಲ್ಲಿ 8 ತಿಂಗಳು ಚೆನ್ನಾಗಿದ್ದು ಹೆರಿಗೆಗಾಗಿ ನಾವು ಚಾಸಾ 1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತೇವೆ ಎಂದರೆ ನಿಜ. 1 ನೇ ಆರೋಪಿ ತಂದೆತಾಯಿಯಾದ 2 ಮತ್ತು 3 ನೇ ಆರೋಪಿತರು ಗದಗಿನಲ್ಲಿ ವಾಸ ಮಾಡುತ್ತಾರೆ ಎಂದರೆ 2 ಮತ್ತು 3 ನೇ ಆರೋಪಿತರು ಗದಗಿನಲ್ಲಿ ವಾಸವಾಗಿದ್ದು 1 ನೇ ಆರೋಪಿ ಮನೆಗೆ ಬಂದುಹೋಗಿ ಮಾಡುತಿದ್ದರು.

6. ಆರೋಪಿ 4 ಮತ್ತು 5 ಗಂಡ ಹೆಂಡತಿಯಾಗಿದ್ದು ಬೂದಿಹಾಳದಲ್ಲಿ ವಾಸವಾಗಿರುತ್ತಾರೆ ಎಂದರೆ ನಿಜ. 1 ನೇ ಆರೋಪಿತರ ಮನೆಗೆ 6 ನೇ ಆರೋಪಿತರು ಬರುವುದು ಹೋಗುವುದು ಮಾಡುತ್ತಾರೆ ಎಂದು 1 ನೇ ಆರೋಪಿತರ ಓಣಿಯಲ್ಲಿರುವ ಜನ ಹೇಳಿರುತ್ತಾರೆ. ಸದರಿ ವಿಚಾರದ ಬಗ್ಗೆ ನಾವು ದೂರನ್ನು ಕೊಟ್ಟಿರುವುದಿಲ್ಲ. ನಂತರ ವಿಚಾರ ಮಾಡಿ ದೂರನ್ನು ಕೊಟ್ಟಿರುತ್ತೇವೆ. ಆರೋಪಿ 6 ರವರಿಗೆ ತನ್ವೀರ್ ಎಂಬುವವರೊಂದಿಗೆ ಮದುವೆಯಾಗಿರುತ್ತದೆ ಎಂದರೆ ನಿಜ. 6 ನೇ ಆರೋಪಿತರು 1 ನೇ ಆರೋಪಿತರ ಮನೆಗೆ ಯಾವತ್ತು ಬಂದಿರುವುದಿಲ್ಲ ಎಂದರೆ ಸುಳ್ಳು. 6 ನೇ ಆರೋಪಿತರೊಂದಿ 1 ನೇ ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು. ಆರೋಪಿತರು ಚಾಸಾ 1 ರವರಿಗೆ 1 ನೇ ಆರೋಪಿ ಮತ್ತು 6 ನೇ ಆರೋಪಿತರೊಂದಿಗೆ ಹೊಂದಿಕೊಂಡು ಹೋಗಬೇಕು ಎಂದು ಆರೋಪಿತರು ಹೇಳಿರುವುದಿಲ್ಲ ಎಂದರೆ ಸುಳ್ಳು. 1 ಮತ್ತು 6 ನೇ ಆರೋಪಿತರು ಜೊತೆಯಾಗಿ ಇರುವುದಿಲ್ಲ ಎಂದರೆ ಸುಳ್ಳು.

7. 1 ನೇ ಆರೋಪಿತರು ಚಾಸಾ 1 ರವರನ್ನು ಚೆನ್ನಾಗಿ ನೋಡಿಕೊಳ್ಳುತಿದ್ದು ಹೊಡೆಬಡೆ ಮಾಡುತ್ತಿರಲಿಲ್ಲ ಎಂದರೆ ಸುಳ್ಳು. ಚಾಸಾ 6 ಮತ್ತು 7 ರವರು ನಮ್ಮ ಸಬಂಧಿಕರು ಎಂದರೆ ನಿಜ. 2007 ರಲ್ಲಿ 1 ನೇ ಆರೋಪಿ ಮತ್ತು ಚಾಸಾ 1 ರವರ ಸಂಬಂಧ ಪಂಚಾಯತಿ ಮಾಡಿರುತ್ತೇವೆ. ನಾವು ಯಾವುದೇ ಪಂಚಾಯತಿ ಮಾಡಿರುವುದಿಲ್ಲ ಎಂದರೆ ಸುಳ್ಳು. ಚಾಸಾ 1 ಮತ್ತು 1 ನೇ ಆರೋಪಿತರ ನಡುವೆ ವಿಚ್ಛೇದನಾ ಆದೇಶ ವಾಗಿರುತ್ತದೆ ಎಂದರೆ ಎಂದರೆ ಸುಳ್ಳು. ಆರೋಪಿತರು ಚಾಸಾ 1 ರವರಿಗೆ ಹೊಡೆ ಬಡೆ ಮಾಡಿರುವುದಿಲ್ಲ ಎಂದರೆ ಸುಳ್ಳು. ಆರೋಪಿತರು ಚಾಸಾ 1 ರವರಿಗೆ ಕಿರುಕುಳ ಕೊಟ್ಟಿರುವುದಿಲ್ಲ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಬಳ್ಳಾರಿ.**